## 28

# ಯೇಸು ನಮಗಾಗಿ ಚಿಂತಿಸುತ್ತಾನೋ?

### ಓದುವ ಮನೆಪಾಠ #10

V. ಎರಡನೇ ಪಸ್ಕದಿಂದ, ಮೂರನೆಯದಕ್ಕೆ (ಮುಂದುವರೆಯುವದು).

G. ಶತಾಧಿಪತಿಯ ಆಳಿನ ಸ್ವಸ್ಥತೆ (ಮತ್ತಾಯ 8:1, 5-13; ಲೂಕ 7:1-10).

H. ವಿಧವೆಯ ಮಗನನ್ನು ಮರಣದಿಂದ ಎಬ್ಬಿಸಿದ್ದು (ಲೂಕ 7:11-17).

I. ಸ್ನಾನಿಕನಾದ ಯೋಹಾನನ ಉತ್ತರ (ಮತ್ತಾಯ 11:2-30; ಲೂಕ 7:18-35).

J. ಯೇಸುವಿನ ಪಾದದ ಅಭಿಷೇಕ (ಲೂಕ 7:36-50).

### ಪೀಠಿಕೆ

ಪರ್ವತ ಪ್ರಸಂಗದ ನಂತರ "ಆತನು (ಯೇಸು) ಬೆಟ್ಟದಿಂದಿಳಿದು ಬರುವಾಗ ಜನರು ಗುಂಪು ಗುಂಪಾಗಿ ಆತನ ಹಿಂದೆ ಹೋದರು" (ಮತ್ತಾಯ 8:1). ಆ ಸಮಯದಿಂದ ಮುಂದುವರೆದು, ಯೇಸು ಎಲ್ಲಿ ಪ್ರಯಾಣಿಸುತ್ತಿದ್ದನೋ ಅಲ್ಲೆಲ್ಲ ಜನರ ಗುಂಪಿನಿಂದ ಸುತ್ತುವರೆಯಲ್ಪಡುತ್ತಿದ್ದನು (ನೋಡಿರಿ ಲೂಕ 7:9, 11).[1] ತನ್ನ ಸುತ್ತಲಿನ ಜನರನ್ನು ಯೇಸು ಕೇವಲ ಒಂದು ಗುಂಪು ಎಂದು ಎಂದಿಗೂ ನೋಡಲಿಲ್ಲ. ಆದರೆ ಅವಶ್ಯಕತೆಯನ್ನು ಹೊಂದಿರುವ ವ್ಯಕ್ತಿಗಳು ಎಂದು ಅವರನ್ನು ನೋಡಿದನು. ಕ್ರಿಸ್ತನ ಈ ಮನೋಭಾವನೆಯನ್ನು ವ್ಯಕ್ತಪಡಿಸುವ ಒಂದು ಪರಿಚ್ಛೇದವು ಲೂಕ 7:13 ರಲ್ಲಿ ಸಿಕ್ಕುವುದಾಗಿದ್ದು ಅದು "ಸ್ವಾಮಿಯು ಆಕೆಯನ್ನು ಕಂಡು *ಕನಿಕರಿಸಿ* ..." (ಒತ್ತಿ ಹೇಳಿದ್ದು ನನ್ನದು) ಎಂದಿದೆ.

ಈ ಪಾಠದಲ್ಲಿ ಶ್ರೇಷ್ಟವಾದ ಗಲಿಲಾಯದ ಸೇವೆಯ ಬಗೆಗೆ ನಾವು ಅಭ್ಯಾಸಿಸೋಣ. ಇದನ್ನು ನಾನು ಯೇಸು ನಮಗಾಗಿ ಚಿಂತಿಸುತ್ತಾನೋ?[2] ಎಂದು ಕರೆಯುತ್ತೇನೆ. ತನ್ನ ಸುತ್ತಮುತ್ತಲಿನವರ ಬಗೆಗೆ ಯೇಸುವಿನ ಚಿಂತಿಸುವಿಕೆ ಮತ್ತು ಕನಿಕರದ ಕುರಿತು ನಮ್ಮ ವೇದಭಾಗವು ನಾಲ್ಕು ವಿಶೇಷವಾದ ಉದಾಹರಣೆಗಳನ್ನು ಒಳಗೊಂಡಿದೆ. ಎಲ್ಲಾ ನಾಲ್ಕೂ ಘಟನೆಗಳು ಲೂಕನ ಪುಸ್ತಕದಲ್ಲಿಯವೇ ಆಗಿವೆ, ಆದ್ದರಿಂದ ಈ ಪಾಠದಲ್ಲಿ ನಾನು ಲೂಕನ ಪುಸ್ತಕವನ್ನು ನನ್ನ ಮೂಲ ಆಧಾರವನ್ನಾಗಿ ಉಪಯೋಗಿಸುತ್ತಿರುವೆ. ಇಲ್ಲಿ ನಾನು ಅನುರೂಪಕವಾಗ ಬಳಸಲ್ಪಡುತ್ತಿರುವ ಎರಡು ಘಟನೆಗಳು ಮತ್ತಾಯನ ಪುಸ್ತಕದಲ್ಲಿಯವೂ ಸಹ ಆಗಿವೆ.

### ರೋಗವು ನಮ್ಮ ಮನೆಯನ್ನು ಮುತ್ತಿದಾಗ ಯೇಸು ಚಿಂತಿಸುವವನಾಗಿದ್ದಾನೆ (ಮತ್ತಾಯ 8:5-13ಣೆ ಲೂಕ 7:1-10)

ಪರ್ವತದ ಮೇಲಿನ ತನ್ನ ಪ್ರಸಂಗವನ್ನು ಮುಗಿದ ನಂತರ ಯೇಸು ಕಪೆರ್ನೌಮಿಗೆ ಹಿಂತಿರುಗಿದನು (ಲೂಕ 7:1). ಶತಾಧಿಪತಿಯು ತನ್ನ ಆಳಿಗೆ ಸ್ವಸ್ಥ ಮಾಡುವಂತೆ ಬೇಡಿ ಕೊಳ್ಳಲು ಯೇಸುವಿನ ಬಳಿಗೆ ಯೆಹೂದ್ಯರ ಹಿರಿಯರನ್ನು ಕಳುಹಿಸಿದನು (ಲೂಕ 7:2-5).[3] ತನ್ನ ಜೊತೆಯ ಪ್ರಧಾನನ ಮಗನನ್ನು ಇತ್ತಿಚೆಗೆ ಯೇಸು ಸ್ವಸ್ಥ ಮಾಡಿದ್ದನ್ನು ಆತನು ಬಹುಶಃ ಕೇಳಿದನು (ಯೋಹಾನ 4:46-54).[4]

ಈ ಶತಾಧಿಪತಿಯು ನೂರು ಸೈನಿಕರ ಮೇಲೆ ಇರುವ ರೋಮನ್ ಅಧಿಕಾರಿಯಾಗಿದ್ದನು

(ಆತನ ಹೆಸರೇ ಸೂಚಿಸುವಂತೆ).[5] ಈ ಶತಾಧಿಪತಿಯು ಯೆಹೂದಿ ಸಮುದಾಯದೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡಿದ್ದನು. ಈತನು ಸಭಾಮಂದಿರದ ಕಟ್ಟಡಕ್ಕೆ ಬಂಡವಾಳವನ್ನು ಒದಗಿಸುವವನಾಗಿದ್ದನು.[6] ಆತನು ದೇವರಲ್ಲಿ ಭಯಭಕ್ತಿಯುಳ್ಳವನಾಗಿದ್ದು, ಯೆಹೋವನನ್ನು ನಂಬಿದವನಾಗಿರಬಹುದು ಆದರೆ ಮತಾಂತರ ಹೊಂದಿದವನಾಗಿರಲಿಲ್ಲ (ನೋಡಿರಿ ಅಪೊಸ್ತಲರ ಕೃತ್ಯಗಳು 13:16).[7] ಆತನ ಕಾಳಜಿಯು ಈಗ ತನ್ನ ಆಳಿನ ಮೇಲಿದೆ.

ಆ ಸೇವಕನು "ಪಾರ್ಶ್ವವಾಯು ಪೀಡಿತನಾಗಿ ಅಧಿಕಾರಿಯ ಮನೆಯಲ್ಲಿ ಬಿದ್ದಿದ್ದನು - ಸಾಯುವ ಹಾಗಿದ್ದನು" ಎಂದು ನಮಗೆ ಹೇಳಲ್ಪಟ್ಟಿದೆ (ಮತ್ತಾಯ 8:6; ಲೂಕ 7:2). ಆ ಸೇವಕನ ಬಗೆಗೆ ಲೂಕನ ವಿವರಣೆಯಲ್ಲಿ "ಶತಾಧಿಪತಿಗೆ ಇಷ್ಟವಾದ ಆಳು" ದಾಖಲಿಸಲ್ಪಟ್ಟಿದೆ (7:2). KJVಯಲ್ಲಿ, "ಆತನಿಗೆ ಪ್ರಿಯನಾದವನು" ಎಂದಿದೆ. ನಿಮಗೆ ಪ್ರಿಯರಾದವರು ಎಂದೆಣಿಸಲ್ಪಟ್ಟವರು, ಸ್ನೇಹಿತ, ಒಬ್ಬ ಸಂಬಂಧಿ ಅಥವಾ ನಿಮ್ಮ ಮನೆಗೆ ಸಂಬಂಧಿಸಿದ ಯಾರಾದರೂ ಗಂಭೀರವಾದ ಕಾಯಿಲೆಗೆ ಒಳಗಾಗಿದ್ದನ್ನು ಹೊಂದಿರುವುದು ಇದೆಯಾ? ಹಾಗಿದ್ದುದಾಗಿದ್ದರೆ ಆ ಶತಾಧಿಪತಿಯ ಕಾಳಜಿಯನ್ನು ನೀವು ಅರ್ಥೈಸಿಕೊಳ್ಳಬಲ್ಲಿರಿ. ಅಂಥ ಸಮಯದಲ್ಲಿ "ಯೇಸು ನಮಗಾಗಿ ಚಿಂತಿಸುತ್ತಾನೆಯೇ?" ಎಂದು ಆಶ್ಚರ್ಯ ಪಡುವವರಾಗಿರುತ್ತೇವೆ. ಆತನು ಹಾಗೆ ಮಾಡುತ್ತಾನೆ ಎಂದು ಈ ಕಥೆಯು ನಮಗೆ ನೆನಪಿಸುವುದಾಗಿದೆ.

ಯೇಸು ಸೈನಿಕನ ಮನೆಯಿಂದ ಪ್ರಾರಂಭಿಸುವ ಮೂಲಕ ಪ್ರತಿಕ್ರಯಿಸಿದನು, ಆದರೆ ಯೇಸು ಆ ಮನೆಗೆ ಬರತಕ್ಕಷ್ಟು ಯೋಗ್ಯತೆಯು ಹೇಳಿಕಳುಹಿಸಿದ ಆ ಮನುಷ್ಯನಲ್ಲಿರಲಿಲ್ಲ. ಆತನು ಯೇಸುವಿನ ಆತ್ಮೀಕ ಅಧಿಕಾರವನ್ನು ಒಪ್ಪಿಕೊಂಡಿದ್ದನು (ಲೂಕ 7:6-8). ಈಗ ಯೇಸು ಅದನ್ನು ಕೇಳಿ ಅತ್ಯಾಶ್ಚರ್ಯಪಟ್ಟು ತನ್ನ ಹಿಂದೆ ಬರುತ್ತಿದ್ದವರಿಗೆ ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿ ಕಾಣಲಿಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ (ಮತ್ತಾಯ 8:10).[8] "ಮತ್ತು ಅದೇ ಗಳಿಗೆಯಲ್ಲಿ ಅವನ ಆಳಿಗೆ ಗುಣವಾಯಿತು" (ಮತ್ತಾಯ 8:13).

ಯೇಸು ಇನ್ನೂ ಭೂಮಿಯಲ್ಲಿ ನಡೆದಾಡುತ್ತಿಲ್ಲ, ಅದ್ಭುತಗಳನ್ನು ಮಾಡುವ ಸಮಯ ದಾಟಿಹೋಯಿತು; ಆದರೆ ನಿನ್ನ ಮನೆಯಲ್ಲಿ ರೋಗವು ಆಕ್ರಮಣಮಾಡಿದಾಗ ದೇವರು ಇನ್ನೂ ನಿನಗಾಗಿ ಚಿಂತಿಸುವನಾಗಿದ್ದಾನೆ. ಪ್ರತಿದಿನಕ್ಕೆ ಬೇಕಾದ ಶಕ್ತಿಯನ್ನು ಆತನು ಕೊಡುವವನಾಗಿದ್ದಾನೆ (ಇಬ್ರಿಯ 13:5ಬಿ, 6).

> ಯೇಸು ಚಿಂತಿಸುತ್ತಾನೆಯೇ ಎಂದು ನನ್ನ ಹೃದಯವು ನೋವಿನಿಂದಿರುವಾಗ
> ಉಲ್ಲಾಸ ಮತ್ತು ಹಾಡುಗಳು ಬಲು ಆಳವಾದಂತಿರಲು;
> ಮತ್ತು ಚಿಂತೆಯು ಹತ್ತಿಕ್ಕಿದಾಗ ಮತ್ತು ಕಾಳಜಿಯು ತಲ್ಲಣಗೊಂಡಾಗ,
> ಮಾರ್ಗಗಳು ಆಯಾಸಯುತವೂ ಮತ್ತು ಕಾಳಜಿಯು ತಲ್ಲಣಗೊಂಡಾಗ;
> ಮಾರ್ಗಗಳು ಆಯಾಸಯುತವೂ ಮತ್ತು ಉದ್ದವೂ ಆದದ್ದಾದರೆ?
>
> ಓಹ್ ಹೌದು, ಆತನು ಚಿಂತಿಸುತ್ತಾನೆ; ನಾನು ಬಲ್ಲೆನು ಆತನು ಚಿಂತಿಸುತ್ತಾನೆ
> ಆತನ ಹೃದಯವು ನನ್ನ ದುಃಖದಿಂದ ತಟ್ಟಲ್ಪಟ್ಟಿತು,
> ದಿನಗಳು ಆಳವಾಗಿ ಆಯಾಸುತವಾದದ್ದಾದರೂ, ಹಗಲು ಮುಸುಕಿನಿಂದ ಮಬ್ಬಾದದ್ದಾದರೂ,
> ನನ್ನ ರಕ್ಷಕನು ಚಿಂತಿಸುತ್ತಾನೆ ಎಂದು ನಾನು ಬಲ್ಲೆನು.[9]

## ಮರಣವು ನಮ್ಮ ಹೃದಯವನ್ನು ಒಡೆದಾಗಲೂ ಯೇಸು ನಮಗಾಗಿ ಚಿಂತಿಸುತ್ತಾನೆ (ಲೂಕ 7:11-17)

"ಸ್ವಲ್ಪಕಾಲದ ಮೇಲೆ"[10] ಯೇಸು ದಕ್ಷಿಣದ ನೈರುತ್ಯ ಕಪೆರ್ನೌಮಿನಿಂದ ಇಪ್ಪತ್ತು ಮೈಲಿ ದೂರದಲ್ಲಿರುವ ನಾಯಿನ್ ಎಂಬ ಊರಿಗೆ ಹೋದನು (ಲೂಕ 7:11).[11] ಯೇಸು, ಆತನ ಶಿಷ್ಯರು, ಮತ್ತು ಆತನೊಂದಿಗೆ ಯಾವಾಗಲೂ ಇರುತ್ತಿದ್ದ ಜನರ ಗುಂಪು "ಊರಬಾಗಿಲ ಹತ್ತಿರ ಬಂದಾಗ ಸತ್ತುಹೋದ ಒಬ್ಬನನ್ನು ಹೊರಗೆ ತರುತ್ತಿದ್ದರು. ಇವನು ತಾಯಿಗೆ ಒಬ್ಬನೇ ಮಗನು: ಆಕೆಯು ಗಂಡಸತ್ತವಳಾಗಿದ್ದಳು" (ವಚನ 12).

ಆ ದಿನಗಳಲ್ಲಿ ವಿಧವೆಯವರು, ಅನಾಥರು ಎಂದು ಪರಿಗಣಿಸಲ್ಪಡುತ್ತಿದ್ದರು. ಈ ಸ್ತ್ರೀಯ ಗಂಡನು ಸತ್ತಾಗ ಆಕೆ ಆತುಕೊಂಡಿರುವ ಮಗನನ್ನಾದರೂ ಅವಳು ಹೊಂದಿದ್ದಳು. ಆ ಸ್ತ್ರೀಯು ಎಷ್ಟು ನೋವನ್ನು ಅನುಭವಿಸಿರಬೇಕೆಂದು ನಿಮ್ಮಲ್ಲಿ ಕೆಲವರು ಅರ್ಥಮಾಡಿಕೊಳ್ಳಬಹುದು. ನಿಮ್ಮ ಜೀವಿತಕ್ಕೆ ಹತ್ತಿರವಾದವರು ತೀರಿಹೋದಂತವರು ಅಂಥವರನ್ನು ಹೊಂದಿರಬಹುದು.

ನಿಮ್ಮ ಹೃದಯವೂ ಹರಿದಾಗ ಯೇಸು ನಮಗಾಗಿ ಚಿಂತಿಸನೇ? ವಚನ 13 ಹೇಳುವಂತೆ ಕರ್ತನು ನಾಯಿನ ಊರಿನ ಆ ವಿಧವೆಯನ್ನು ಕಂಡು "ಆಕೆಯನ್ನು ಕಂಡು ಕನಿಕರಿಸಿ"ದನು. ದುಃಖದಿಂದ ನಮ್ಮ ಕಣ್ಣುಗಳು ತುಂಬಿದಾಗ ಆತನು ಸಹ ನಮಗಾಗಿ ಕರುಣಾಸಾಗರನಾಗುತ್ತಾನೆ (ಯಾಕೋಬ 5:11).

ಯೇಸು ಆಕೆಗೆ "ಅಳಬೇಡ" ಎಂದು ಹೇಳಿದನು (ವಚನ 13). ನಂತರ ಆತನು ಚಟ್ಟದ[12] ಹತ್ತಿರ ಹೋಗಿ ಆಕೆಯ ಮಗನಿಗೆ "ಯೌವನಸ್ಥನೇ ಏಳು ಎಂದು ನಿನಗೆ ಹೇಳುತ್ತೇನೆ" ಅಂದನು! (ವಚನ 14). "ಅನ್ನುತ್ತಲೇ ಸತ್ತಿದ್ದವನು ಎದ್ದು ಕೂತುಕೊಂಡು" (ತನ್ನ ದೇಹವು ಗುಣಪಡಿಸಲ್ಪಟ್ಟಿದೆ ಎಂದು ತೋರಿಸುವದಕ್ಕಾಗಿ) ಮಾತನಾಡುವುದಕ್ಕೆ ತೊಡಗಿದನು (ತನ್ನ ಮನಸ್ಸು ಕೂಡಾ ಪುನ ಸ್ಥಾಪಿಸಲ್ಪಟ್ಟಿರುವುದನ್ನು ಪ್ರಾಯೋಜಿತಗೊಳಿಸಲು) (ವಚನ 15).

ಸತ್ತವನು ಎಬ್ಬಿಸಿದ್ದು ಯೇಸುವಿನ ಸೇವೆಯ ಆರಂಭದಲ್ಲಿನ ಮೊದಲ ದಾಖಲೆಯ ಕಾರ್ಯವಾಗಿತ್ತು,[13] ಆದರೆ ಇದು ಕೇವಲ ರೋಗಿಗಳನ್ನು ಸ್ವಸ್ಥಮಾಡುವುದರಲ್ಲಿನ ಮುಂದುವರೆದ ಭಾಗ ಇದಾಗಿತ್ತು. ಎರಡೂ ತರದ ಅದ್ಭುತಕಾರ್ಯಗಳು ತದ್ವಿರುದ್ಧವಾಗಿ ಮಾರಕವಾದ ಬಲವಾಗಿದ್ದು ದೇಹದ ಬಾಹ್ಯರೂಪವನ್ನು ಸರ್ವನಾಶಮಾಡುವವುಗಳು ಆಗಿವೆ. ದೇಹವನ್ನು ಸ್ವಸ್ಥಮಾಡಲು ಶಕ್ತನು ಎಂದು ಪ್ರತಿಪಾದಿಸುವವನು ಮರಣದಿಂದ ಎಬ್ಬಿಸುವವನೂ ಆಗಿದ್ದಾನೆ.[14]

ಆ ಯೌವನಸ್ಥನು ಎದ್ದು ಕೂತಾಗ ಅಲ್ಲಿದ್ದವರೆಲ್ಲರೂ ಭಯಹಿಡಿದವರಾದರು. "... ಮಹಾ ಪ್ರವಾದಿ ನಮ್ಮಲ್ಲಿ ಎದ್ದಿದ್ದಾನೆ, ದೇವರು ತನ್ನ ಜನರಿಗೆ ದರ್ಶನವನ್ನು ಅನುಗ್ರಹಿಸಿದ್ದಾನೆ ಎಂದು ದೇವರನ್ನು ಕೊಂಡಾಡುವವರಾದರು!" (ವಚನ 16).

ಈ ಕಥೆಯಲ್ಲಿ ನನಗೆ ಪ್ರಿಯವಾದ ಭಾಗವು 15ನೇಯ ವಚನದ ಕೊನೆಯ ಭಾಗ ವಾಗಿದ್ದು ಅದು: "ಯೇಸು ಅವನನ್ನು ಅವನ ತಾಯಿಗೆ ಕೊಟ್ಟನು." ಆ ಯೌವನಸ್ಥನ ಕೈಯನ್ನು ಆತನ ತಾಯಿಯ ಕೈಯಲ್ಲಿ ಕೊಡುವಾಗಿನ ಕರುಣಾಮಯ ಮುಖವನ್ನು ನೀನು ಚಿತ್ರಿಸಬಲ್ಲೆಯಾ? ಅಲ್ಲಿ ಸಂಭವಿದ್ದನ್ನು ಅರಗಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಆ ತಾಯಿಯ ಕಣ್ಣಲ್ಲಿ ನೀರು ಹರಿಯುವುದನ್ನು ನೀನು ನೋಡಬಲ್ಲೆಯಾ?

ನಾವು ಅದ್ಭುತಕಾರ್ಯಗಳ ಕಾಲದಲ್ಲಿ ಇಲ್ಲದವರಾಗಿದ್ದೇವೆ. ಮರಣವು ನಮ್ಮ ಕಣ್ಣೀರಿನ ಭಾಗವಾಗಿದ್ದಾಗ ಯೇಸು ಚಿಂತಿಸನು ಎಂದು ಇದರರ್ಥವಲ್ಲ. ಆತನು ಆ ದಿನಕ್ಕೋಸ್ಕರ ಬಲವನ್ನು ಅನುಗ್ರಹಿಸುವವನಾಗಿದ್ದಾನೆ (ಯೆರೆಮೀಯ 16:19) ಮತ್ತು ಆತನು ಮರಣದಿಂದ ಎಬ್ಬಿಸುವ ಮತ್ತು ನಾವೆಲ್ಲರೂ ನಮ್ಮ ಪ್ರೀಯರನ್ನು ಕಂಡುಕೊಳ್ಳುವ ಆ ಮಹಾ ದಿನವನ್ನು ನಾವು ಎದುರುನೋಡುವವರಾಗಿದ್ದೇವೆ (1 ಥೆಸಲೋನಿಕ 4:13-18).

ನಾನು "ಹೋಗಿ ಬರುವೆ" ಎಂದು ಹೇಳಿದಾಗ ಯೇಸು ಚಿಂತಿಸುವನೇ
ಭೂಮಿಯಲ್ಲಿ ನಮಗೆ ಅತಿ ಪ್ರೀಯರಾದವರಿಗೆ,
ನನ್ನ ದುಃಖದ ಹೃದಯವು ಇನ್ನೂ ಒಡೆಯುವವರೆಗೆ ಇನ್ನೂ ನೋಯುವುದಾಗಿದೆ
ಎಲ್ಲಾ ಆತನಿಗಲ್ಲವೇ? ಆತನು ನೋಡುವನೇ?

ಓಹ್ ಹೌದು, ಆತನು ಚಿಂತಿಸುತ್ತಾನೆ; ನಾನು ಬಲ್ಲೆನು ಆತನು ಚಿಂತಿಸುತ್ತಾನೆ,
ಆತನ ಹೃದಯವು ನನ್ನ ದುಃಖದಿಂದ ತಟ್ಟಲ್ಪಟ್ಟಿತು;
ದಿನಗಳು ಆಳವಾದ ಆಯಾಸಯುತವಾದದ್ದಾದರೂ, ಹಗಲು ಮುಸುಕಿನಿಂದ ಮಬ್ಬಾದದ್ದಾದರೂ
ನನ್ನ ರಕ್ಷಕನು ಚಿಂತಿಸುತ್ತಾನೆ ಎಂದು ನಾನು ಬಲ್ಲೆನು.

## ಸಂಶಯವು ನನ್ನ ಮನಸ್ಸನ್ನು ಕಿರಿಕಿರಿ ಪಡಿಸಿದಾಗ ಯೇಸು ಚಿಂತಿಸುವವನಾಗಿದ್ದಾನೆ (ಮತ್ತಾಯ 11:2-30; ಲೂಕ 7:18-35)

ಯೇಸು ಸತ್ತವನನ್ನು ಎಬ್ಬಿಸಿದ ಸುದ್ದಿಯು ದೇಶದಲ್ಲೆಲ್ಲಾ, ಹೆರೋದನಿಂದ ಯೋಹಾನನ್ನು ಸೆರೆಯಲ್ಲಿಡಲ್ಪಟ್ಟ, ದಕ್ಷಿಣ ಪ್ರಾಂತದಲ್ಲಿರುವ ಯುದಾಯಕ್ಕೂ ಕೂಡಾ ಹರಡಿತು (ಲೂಕ 7:17[15]). ಜೋಸ್ಫಸ್‌ನ ಪ್ರಕಾರ ಸ್ನಾನಿಕನಾದ ಯೋಹಾನನ್ನು ಮೃತ್ಯು ಸಮುದ್ರದ[16] ಪೂರ್ವ ಭಾಗದ ದಂಡೆಯ ಮೇಲಿರುವ ಪೆರಿಯದಲ್ಲಿನ ಮೆಕರಸ್ ಅರಮನೆಯಲ್ಲಿ ಬಂಧಿಸಿ ಇಡಲಾಗಿತ್ತು.

ಯೆಹೋನನ ಶಿಷ್ಯರು ಯೇಸುವಿನ ಕಾರ್ಯಗಳನ್ನು ಆತನಿಗೆ ತಿಳಿಸಿದಾಗ, ಆತನು "ಬರಬೇಕಾದವನು ನೀನೋ, ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ" ಎಂದು ಕೇಳಲು ಅವರಲ್ಲಿ ಇಬ್ಬರನ್ನು ಕರ್ತನೆಡೆಗೆ[17] ಕಳುಹಿಸಿದನು (ಲೂಕ 7:19). "ಬರಬೇಕಾದವನು" ಎಂಬುದರ ಗ್ರೀಕ್ ಪದದ ಅಕ್ಷರ ಸಹ ಅರ್ಥವು "ಬರಲಿದ್ದವನು" ಎಂದಾಗಿದೆ (ನೋಡಿರಿ KJV). ಯೋಹಾನನೂ ಕೂಡಾ ಈ ಹಿಂದೆ ಆತನ ಬಗೆಗೆ ಮಾತನಾಡುವಾಗ ಇದೇ ರೀತಿಯ ಅಂದರೆ "ನನ್ನ ಹಿಂದೆ *ಬರುವವನು*" ಎಂದು ಮಾತನಾಡಿದ್ದನು (ಮತ್ತಾಯ 3:11; ಒತ್ತಿ ಹೇಳಿದ್ದು ನನ್ನದು).

ಯೇಸುವೇ ಮೆಸ್ಸೀಯನು (ಬರಬೇಕಾದವನ ಬಗ್ಗೆ) ಎಂದು ಘೋಷಿಸುವಲ್ಲಿ ಯೋಹಾನನು ಯಾವ ಅಳುಕನ್ನು ಹೊಂದಿರಲಿಲ್ಲ (ಯೋಹಾನ 1:29-36; 3:23-30), ಸ್ನಾನಿಕನಾದ ಯೋಹಾನನು ಕ್ಷಣಿಕವಾದ ಲೋಪವನ್ನು ಹೊಂದಿರುವ ಸಾಧ್ಯತೆಯನ್ನು ವ್ಯಾಖ್ಯಾನಕಾರರು ಇಷ್ಟವಿಲ್ಲದೆ ಒಪ್ಪಿಕೊಳ್ಳುತ್ತಾರೆ. ಬೈಬಲ್ ಅದರ ನಾಯಕರುಗಳನ್ನು ಅವರ ಕುಂದುಗಳಿಂದ ಸ್ವತಂತ್ರರನ್ನಾಗಿಸಿಲ್ಲ. ನಾವು ವೇದಭಾಗವನ್ನು ಬಲು ಸ್ವಾಭಾವಿಕ ರೀತಿಯಲ್ಲಿ ತೆಗೆದುಕೊಂಡಿದ್ದೇ ಆದರೆ, ಕತ್ತಲೆಯ ಪಂಜರದ ಕಪ್ಪಾದ ಕೋಟೆಯ ಅಡಿಯಲ್ಲಿ ಯೋಹಾನನು ನಂಬಿಕೆಯೊಡನೆ ಹೋರಾಡಿದನು.

ಇದು ಹೇಗೆ ಸಂಭವಿಸಿರಬಹುದೆಂಬುದನ್ನು ಅರಿತುಕೊಳ್ಳುವಲ್ಲಿ ನನಗೆ ಯಾವ ಸಮಸ್ಯೆಯೂ ಇಲ್ಲ. ಮೊದಲ ಸ್ಥಾನದಲ್ಲಿ, ಕಾಡಿನ ಈ ಬಲವುಳ್ಳ ಮನುಷ್ಯನನ್ನು ಕ್ರಿಯಾಹೀನನನ್ನಾಗಿಸುವುದಕ್ಕೆ ಒತ್ತಾಯಿಸಲ್ಪಟ್ಟಿದ್ದಾನೆ. ಆತನು ಅನೇಕ ತಿಂಗಳಿಂದ ಸೆರೆಯಲ್ಲಿ ಇಡಲ್ಪಟ್ಟನು. ಇದು ಅವನನ್ನು ಕೊರಗುವಂತೆ ಮಾಡಿತ್ತು. ಇದು ಕಠೋರದಿಂದ ಕಠೋರವಾಗಿ ಕಡಿದುಹಾಕುವ ವಿಚಾರದತ್ತ ನಡೆಸಿತು.

ಮುಂದೆ ಯೇಸು ಯೋಹಾನನು ಸ್ವೀಕರಿಸಿದ ಅಂಶಗಳನ್ನು ನಡೆಸಿಕೊಂಡು ಹೋಗಿರಲಿಕ್ಕಿಲ್ಲ. ಸ್ನಾನಿಕನಾದ ಯೋಹಾನನು ಮೆಸ್ಸೀಯನನ್ನು ಮರಗಳ ಬೇರೆಗೆ ಕೊಡಲಿ ಹಾಕುವವನು, ಕಣದಲ್ಲಿನ ರಾಶಿಯನ್ನು ತೂರಿ ಹಸನುಮಾಡುವವನೂ ಎಂದೂ

ವರ್ಣಿಸಿದ್ದಾನೆ (ಮತ್ತಾಯ 3:10, 12).[18] ದೇವರ ರಾಜ್ಯದ ಬಗೆಗೆ ಯೋಹಾನನು ಕೂಡಾ ಇತರ ಯೆಹೂದಿಗಳು ಹೊಂದಿರುವಂತೆಯೇ ಭೌತಿಕ ವಿಚಾರವನ್ನು (ಅಪೊಸ್ತಲರನ್ನೂ ಒಳಗೊಂಡು ಅಪೊಸ್ತಲರ ಕೃತ್ಯಗಳು 1:6) ಹೊಂದಿರಬಹುದು. ದೇವರು ತನ್ನ ಸೈನ್ಯದೊಡನೆ ಎದ್ದುಬರುವನು, ರೋಮವನ್ನು ಸೋಲಿಸುವನು, ದೈವಿಕವಲ್ಲದ ಯೆಹೂದಿಗಳನ್ನು ಪಟ್ಟಣದಿಂದ ಹೊರಗೆ ಓಡಿಸಿಬಿಡುವನು ಎಂದು ಆತನು ಎದುರು ನೋಡುವವನಾಗಿರಬಹುದು.[19] ಅದಲ್ಲದೆ ಯೇಸು ತನ್ನನ್ನು ಬಿಡುಡೆ ಮಾಡುವನು ಮತ್ತು ಹೆರೋದನ ಮೇಲೆ ಶಿಕ್ಷೆಯನ್ನು ಬರಮಾಡುವನು ಎಂದು ಯೋಚಿಸುವವನಾಗಿರಬಹುದು. ಇದರ ಬದಲಾಗಿ ಯೇಸು "ಕೇವಲ" ಊರುಗಳಲ್ಲಿ ಹೋಗಿ ಜನರಿಗೆ ಬೋಧನೆಯನ್ನು ಮತ್ತು ಸಹಾಯವನ್ನು ಮಾಡುತ್ತಿದ್ದನು.

ಹೆರೋದ ಮತ್ತು ಹೆರೋದ್ಯಳಿಂದ ತನ್ನ ಮರಣವು ಸನ್ನಿಹಿತವಾಗಿದೆ ಎಂದು ಬಹುಶಃ ಯೋಹಾನನು ಮುಂದಾಗಿಯೇ ತಿಳಿದುಕೊಂಡಿರಬೇಕು. ಇದು ಆಶ್ಚರ್ಯಚಕಿತವಾದುದೇನೂ ಅಲ್ಲ, ಆದ್ದರಿಂದಲೇ "ನಾನು ನನ್ನ ದೇವರು ಕೊಡಮಾಡಿದ ಕಾರ್ಯವನ್ನು ಸಂಪೂರ್ಣಗೊಳಿಸಿದ್ದೇನೆಯಾ ಅಥವಾ ನನ್ನ ಕೂಲಿಯು ಇನ್ನೂ ಬಾಕಿಯಿದೆಯಾ" ಎಂಬುದು ಧೈರ್ಯಕೊಟ್ಟುಕೊಳ್ಳಲು ಆತನು ಇಚ್ಚಿಸಿದ್ದಾನೆ. ಅಂತೆಯೇ ಆತನು ಇಬ್ಬರನ್ನು ಯೇಸುವಿನ ಬಳಿಗೆ ಕಳುಹಿಸಿ "ಬರಬೇಕಾದವನು ನೀನೋ, ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ" (ಲೂಕ 7:19; KJV) ಪ್ರಶ್ನಿಸಿದನು.

ನಮ್ಮಲ್ಲಿ ಹೆಚ್ಚಾದವರು, ಕೆಲಸಮಯದಲ್ಲಿ ಅಥವಾ ಮತ್ತೊಮ್ಮೆ, ನಂಬಿಕೆಯ ಬಗೆಗೆ ಪ್ರಶ್ನೆಯನ್ನು ಹೊಂದಿರುತ್ತೇವೆ. ಕೆಲವರು ಸಂಶಯದ ಕಪ್ಪಾದ ಯಾತನೆಯಿಂದ ನರಳುವವರಾಗಿರುತ್ತಾರೆ. ಎಲ್ಲಿಯವರೆಗೆ ನಾವು ದೇವರಿಗೆ ನಮ್ಮ ಬಾಗಿಲನ್ನು ಮುಚ್ಚಿರುವುದಿಲ್ಲವೋ ಅಲ್ಲಿಯವರೆಗೆ ಆತನೂ ಕೂಡಾ ನಮಗಾಗಿ ಬಾಗಿಲನ್ನು ಮುಚ್ಚುವುದಿಲ್ಲ ಎಂಬುದನ್ನು ಅರಿತುಕೊಳ್ಳಿರಿ.[20] ವಾಕ್ಯಕ್ಕಾಗಿ ಹುಡುಕುವುದಕ್ಕಾಗಿ ಪ್ರಾಮಾಣಿಕ ಹೃದಯವನ್ನು ಎಲ್ಲಿಯವರೆಗೆ ಹೊಂದಿರುತ್ತೇವೆಯೋ ಅಲ್ಲಿಯವರೆಗೆ, ಕರ್ತನೂ ಚಿಕ್ಕಮಕ್ಕಳ ಹಾಗೆ ನಮ್ಮೊಂದಿಗೆ ತಾಳ್ಮೆಯಿಂದಿರುವನು (ಲೂಕ 8:15; 1 ಪೇತ್ರ 2:2; 1 ತಿಮೋಥೆ 1:16). ಸಂಶಯವು ನಮ್ಮ ಮನಕ್ಕೆ ತೊಂದರೆ ಕೊಡುವಾಗ ಯೇಸು ನಮಗಾಗಿ ಕಾಳಜಿ ಮಾಡುವವನಾಗಿದ್ದಾನೆ.

ಯೋಹಾನನ ಶಿಷ್ಯರು ಯೇಸುವು ಅಸ್ವಸ್ಥನನ್ನು ಸ್ವಸ್ಥಮಾಡುತ್ತಿದ್ದ ಕಾರ್ಯದಲ್ಲಿ ತೊಡಗಿಕೊಂಡಾಗ ಆತನನ್ನು ಭೇಟಿಯಾದರು. ಅವರ ಪ್ರಶ್ನೆಯನ್ನು ಕೇಳಿದಾಗ ಆತನು "ಇಂಥ ಪ್ರಶ್ನೆಗಳನ್ನು ಕೇಳುವಲ್ಲಿ ನಿಮಗೆ ನಾಚಿಕೆಯಾಗಬೇಕೆ" ಎಂದು ನಿಮ್ಮ ಬೋಧಕನಿಗೆ ಹೇಳಿರಿ ಎಂದು ಆ ಮನುಷ್ಯರಿಗೆ ಗದರಿಸಲಿಲ್ಲ, ಬದಲಾಗಿ "ನೀವು ಕಂಡು ಕೇಳಿದವುಗಳನ್ನು ಯೋಹಾನನಿಗೆ ತಿಳಿಸಿರಿ; ಕುರುಡರಿಗೆ ಕಣ್ಣುಬರುತ್ತದೆ, ಕುಂಟರಿಗೆ ಕಾಲುಬರುತ್ತವೆ, ಕುಷ್ಟರೋಗಿಗಳು ಶುದ್ಧರಾಗುತ್ತಾರೆ, ಕಿವುಡರಿಗೆ ಕಿವಿಬರುತ್ತವೆ, ಸತ್ತವರು ಜೀವವನ್ನು ಹೊಂದುತ್ತಾರೆ. ಬಡವರಿಗೆ ಸುವಾರ್ತೆಯು ಸಾರಲ್ಪಡುತ್ತದೆ" ಎಂದು ಉತ್ತರಿಸಿದನು (ಲೂಕ 7:22). ಇದು ಯೆಶಾಯ 35:5 ಮತ್ತು ಯೆಶಾಯ 61:1 ರಲ್ಲಿನ ಚಿರಪಚಿತ ಮೆಸ್ಸೀಯನ ಪ್ರಶ್ನೆಗಳನ್ನು ಪ್ರಸ್ತಾಪಿಸುವುದಾಗಿದೆ. ಮೆಸ್ಸೀಯನಿಗಾಗಿ ಜನರು ಎದುರು ನೋಡುವ ಕಾರ್ಯಕ್ರಮವನ್ನು ಆತನು ಹೊತ್ತುಕೊಳ್ಳದಿದ್ದರೂ ಕೂಡಾ, ತಾನು ಆ *ದೇವರ* ಆ ನಿಯೋಗವನ್ನು ಸಂಪೂರ್ಣಗೊಳಿಸುವುದಾಗಿ ಯೇಸು ಸ್ನಾನಿಕನಾದ ಯೋಹಾನನಿಗೆ ಭರವಸೆಯನ್ನು ಕೊಡಲು ಬಯಸಿದ್ದನು.

"ನನ್ನ ವಿಷಯದಲ್ಲಿ ಸಂಶಯ ಪಡದವನೇ ಧನ್ಯನು" ಎಂದು ಆತನು ಅದಕ್ಕೆ ಸೇರಿಸುವವನಾಗಿದ್ದಾನೆ (7:23).[21] ಇತರರು ಯೇಸುವನ್ನು ಮನನೋಯಿಸುವ ಅಪಾದನೆಯು (ಮತ್ತಾಯ 13:57), ಆದರೆ ಯೋಹಾನನೂ ಅವರಲ್ಲಿ ಒಬ್ಬನು ಆಗಿರುವ ಬಯಕೆ ಯೇಸುವಿನದು ಆಗಿರಲಿಲ್ಲ. "ನಂಬಿಕೆಯನ್ನು ಇಟ್ಟುಕೊಳ್ಳುವದು" ಲಿಂದ ಸ್ನಾನಿಕನಾದ

ಯೋಹಾನನನ್ನು ಪ್ರೋತ್ಸಾಹಿಸುವದು ಆತನ ರೀತಿಯಾಗಿತ್ತು. ಒಂದು ಭಾವಾನುವಾದವು ಹೀಗಿದೆ ಎಂದರೆ "ನನ್ನಲ್ಲಿ ತನ್ನ ನಂಬಿಕೆಯನ್ನು ಕಳಕೊಳ್ಳದವನೇ ಸಂತುಷ್ಟನು."[22]

ಯೋಹಾನನ ಪ್ರಶ್ನೆಯು ಯೇಸುವಿನಿಂದ ಎರಡು ಬೋಧನೆಗೆ ಪ್ರೇರೇಪಿಸುವುದಾಗಿದೆ. ಮೊದಲನೆಯದು ಯೋಹಾನನ ಸಮರ್ಥನೆಯಾಗಿತ್ತು (ಲೂಕ 7:24-30). J. W. McGarvey ರವರು ಈ ಪ್ರೋತ್ಸಾಹದಾಯಕ ವಿಚಾರವನ್ನು ಬರೆದಿದ್ದಾರೆ. "ಒಂದು ಕಾರ್ಯವು ಒಂದು ಲಕ್ಷಣವನ್ನು ಮಾಡಲಾರರು, ಒಂದು ಸಂಶಯವು ಇದನ್ನು ನಾಶಮಾಡಲಾಗದು."[23]

ಮಲಾಕಿಯನ ಪ್ರವಾನೆಯಲ್ಲಿ ವರ್ಣಿಸಿದ ಹಾಗೆ ಯೋಹಾನನು ದೂತನಾಗಿದ್ದಾನೆ ಎಂದು ಕ್ರಿಸ್ತನು ಒತ್ತಿ ಹೇಳುತ್ತಾನೆ (ಲೂಕ 7:27; ಮಲಾಕಿ 3:1; ನೋಡಿರಿ ಮತ್ತಾಯ 11:10; ಮಾರ್ಕ 1:2) - "ಬರಬೇಕಾದ ಎಲಿಯನಾಗಿದ್ದಾನೆ" (ಮತ್ತಾಯ 11:14; ಮಲಾಕಿ 4:5) ಎಂದು ಕ್ರಿಸ್ತನು ಒತ್ತಿ ಹೇಳುತ್ತಾನೆ.[24] "ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಯೋಹಾನನಿಗಿಂತ ದೊಡ್ಡವನು ಒಬ್ಬನೂ ಇಲ್ಲ" ಎಂದು ಆತನು ಹೇಳುತ್ತಾನೆ (ಲೂಕ 7:28). ಎಂಥ ಶಿಫಾರಸು!

ನಂತರ ಯೇಸು ಈ ಅದ್ಭುತವಾದ ಮಾತುಗಳನ್ನು ಸೇರಿಸುವವನಾಗಿದ್ದಾನೆ, "ಆದರೂ ದೇವರ ರಾಜ್ಯದಲ್ಲಿ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಹೇಳುತ್ತೇನೆ" (ಲೂಕ 7:28). ಯೇಸು ಯೋಹಾನನ ಬಗೆಗೆ ಹೇಳಿದಂತೆ ಸ್ನಾನಿಕನಾದ ಯೋಹಾನ ಎಂದಿಗೂ ದೇವರ ರಾಜ್ಯದಲ್ಲಿ ಇರದೇ ಹೋದರೆ ಯೇಸುವಿನ ಈ ಹೇಳಿಕೆ ನಂತರ ಆ ಹೇಳಿಕೆಯು ನಿಜವಾಗುವುದಾಗಿದೆ. "ಒಂದು ಹಳೆಯ ನ್ಯಾಯಯುತವಾದ ಗಾದೆಯು ಇರದೇ ಹೋದರೆ ಯೇಸುವಿನ ಈ ಹೇಳಿಕೆ ನಂತರ ಆ ಹೇಳಿಕೆಯು ನಿಜವಾಗುವುದಾಗಿದೆ." ಒಂದು ಹಳೆಯ ನ್ಯಾಯಯುತವಾದ ಗಾದೆಯು ಹೀಗೆ ಹೇಳುತ್ತದೆ, "ಕನಿಷ್ಟನಲ್ಲಿ ಶ್ರೇಷ್ಟನಾದವನು ಗರಿಷ್ಟರಲ್ಲಿ ಶ್ರೇಷ್ಟನಾದವನಿಗಿಂತ ಶ್ರೇಷ್ಟನು" ಚಿಕ್ಕದಾದ ವಜ್ರವು ದೊಡ್ಡದಾದ ಅಗ್ನಿಶಿಲೆಗಿಂತ [ಬಂಡೆ][25] ಶ್ರೇಷ್ಟವಾದದ್ದು ಆಗಿದೆ ಎಂಬ ಹೇಳಿಕೆಯುಂಟು. ಯೋಹಾನನು ದೇವರ ರಾಜ್ಯಕ್ಕೆ/ಸಭೆಗೆ ಮಾರ್ಗವನ್ನು ಸಿದ್ಧಮಾಡಿದನು, ಆದರೆ ನಾನು ಮತ್ತು ಇದರ ಪ್ರಮುಖ ಭಾಗವಾಗಿರುವದು ಉನ್ನತ ಅವಕಾಶವಾಗಿರುವುದಾಗಿದೆ.

ಯೋಹಾನನ ಬಗೆಗಿನ ಯೇಸುವಿನ ಶಿಫಾರಸ್ಸಿನಲ್ಲಿ ಜನರು ಸಂತೋಷಿಸಿದರು ಯಾಕೆಂದರೆ ಅವರು ಆತನಿಂದ ದೀಕ್ಷಾಸ್ನಾನ ಹೊಂದಿದ್ದರು (ಲೂಕ 7:29). "ಆದರೆ ಫರಿಸಾಯರೂ ಧರ್ಮೋಪದೇಶಕರು ಅವನಿಂದ ದೀಕ್ಷಾಸ್ನಾನ ಮಾಡಿಸಿಕೊ ಳ್ಳದೆ ಹೋದದ್ದರಲ್ಲಿ ತಮ್ಮ ವಿಷಯವಾಗಿ ದೇವರ ಸಂಕಲ್ಪವನ್ನು ನಿರಾಕರಿಸಿದರು" ಎಂಬುದು ಯೆಹೂದಿ ನಾಯಕರು ಸ್ನಾನಿಕನಾದ ಯೋಹಾನನ ಬೋಧನೆಗಳಿಗೆ ಪ್ರತಿಕ್ರಯಿಸುತ್ತಿರಲಿಲ್ಲ ಎಂದು ಯೇಸುವಿಗೆ ನೆನಪಿಸುವುದಾಗಿದೆ (ಲೂಕ 7:30).

ಅಚ್ಚರಿಗೊಳಿಸಿದ ಅಪನಂಬಿಗಸ್ತಿಕೆ, ಮತ್ತು ಆತನನ್ನು ದುಃಖಕ್ಕೆ ಎಡೆಮಾಡಿದವುಗಳು ಮೇಲಿನ ಇದು ಕ್ರಿಸ್ತನ ಎರಡನೆಯ ಬೋಧನಾ ಸರಣಿಗೆ ಪ್ರೇರೇಪಿಸಿತು. "ಯೋಹಾನನ ವೈರಾಗ್ಯವನ್ನು ಟೀಕಿಸುತ್ತಿದ್ದವರು ಈಗ ಯೇಸುವಿನ ಸೌಹಾರ್ದತೆಯನ್ನು ಖಂಡಿಸುತ್ತಿದ್ದಾರೆ" ಎಂದು ಯಾವದಕ್ಕೂ ತೃಪ್ತರಾಗದೆ ಎಲ್ಲವನ್ನೂ ನಿರಾಕರಿಸುತ್ತಾ ಚಂಡಿಹಿಡಿಯುವ ಮಕ್ಕಳಂತೆ ಇರುವ ಫರಿಸಾಯರನ್ನು ಯೇಸು ಗದರಿಸಿದನು (ಲೂಕ 7:31-34). ತನ್ನ ಮತ್ಕಾರ್ಯಗಳ ಲಾಭವನ್ನು ಹೊಂದಿದ[26] ಪಟ್ಟಣಗಳು ಆತನನ್ನು ನಿರಾಕರಿಸುತ್ತಿರುವ ಪಟ್ಟಣಗಳನ್ನು ಆತನು ಗದರಿಸಿದನು (ಮತ್ತಾಯ 11:20-24).

ಕ್ರಿಸ್ತನು ಭಾರವಾದ ಹೃದಯದಿಂದ ತಂದೆಯೆಡೆಗೆ ತಿರುಗಿಕೊಂಡನು. ದೇವರು "ಜಾಣರಿಂದಲೂ ಮತ್ತು ಬುದ್ಧಿವಂತರಿಂದಲೂ [ತಮ್ಮನ್ನು ತಾವು ಜಾಣರೆಂದು ಪರಿಗಣಿಸುವ ಫರಿಸಾಯರಂತ ಜನರಿಂದಲೂ (ಯೋಹಾನ 9:40)] ಈ ಸಂಗತಿಗಳನ್ನು ಮುಚ್ಚಿಟ್ಟಿದ್ದಕ್ಕಾಗಿ ಮತ್ತು ಅದನ್ನು ... ಮೊಲೆಕೂಸುಗಳ ಬಾಯಿಂದ ಪ್ರಕಟಿದನು [ನಮ್ಮ ಅವಶ್ಯಕತೆಗಳ್ಳು

ಅರಿತುಕೊಳ್ಳದಂತ ಮುಗ್ಧರು (ಮತ್ತಾಯ 5:3; 18:3)] ಎಂಬುದನ್ನು ಒಳಗೊಂಡ ಪ್ರಾರ್ಥನೆಯು ಆತನ ತುಟಿಗಳಿಂದ ಹೊರಬಿತ್ತು" (ಮತ್ತಾಯ 11:25). ನಂತರ ಯೇಸು ಜನರ ಗುಂಪಿನೆಡೆಗೆ ತಿರುಗಿ ಶ್ರೇಷ್ಟ ಆಹ್ವಾನದ ಕರೆಯನ್ನು ವಿಸ್ತರಿಸಿದನು.

> ಎಲೈ ಕಷ್ಟಪಡುವವರೆ ಹೊರೆಹೊತ್ತವರೆ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು. ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೋಗವನ್ನು[27] ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕೆಂದರೆ ನನ್ನ ನೋಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು (ಮತ್ತಾಯ 11:28-30).

ಅನೇಕ ಜನರು ಭಾರವಾದ ಹೊರೆಯಿಂದ ಕಷ್ಟಪಡುವವರಾಗಿರುತ್ತಾರೆ. ಅವರಲ್ಲಿ ನೀವೂ ಒಬ್ಬರಾಗಿರಬಹುದು. ಬಹುಶಃ ನೀವೂ ಯೋಹಾನನು ಹೊಂದಿದಂತೆ ಸಂಶಯವನ್ನು ಹೊಂದಿರಬಹುದು. ಹಾಗಗಿದ್ದಾದರೆ ಸಂತೋಷಿಸು ಯೇಸು ನಿನಗಾಗಿ ಚಿಂತಿಸುತ್ತಾನೆ.

ನನ್ನ ದಾರಿಯು ಕತ್ತಾಲಲ್ಲಿರುವಾಗ ಯೇಸು ಚಿಂತಿಸುವನೇ
ಹೆಸರಿಲ್ಲ ಭೀತಿ ಮತ್ತು ಭಯದಲ್ಲಿ ನಾನಿರುವೆನೇ?
ಆಳವಾದ ರಾತ್ರಿಯ ನೆರಳಿನ ಮೇಲೆ ಹಗಲು ಬೆಳಕನ್ನು ಫಲಿಸಿದಾಗ,
ಓಹ್ ಹೌದು, ಆತನು ಚಿಂತಿಸುತ್ತಾನೆ; ನಾನು ಬಲ್ಲೆನು ಆತನು ಚಿಂತಿಸುತ್ತಾನೆ?

ಆತ ಇನ್ನಷ್ಟು ಹತ್ತಿರವಿರಲು ಆತ ಚಿಂತಸನೇ,
ಆತನ ಹೃದಯವು ನನ್ನ ದುಃಖದಿಂದ ತಟ್ಟಲ್ಪಟ್ಟಿತು;
ದಿನಗಳು ಆಳವಾದ ಆಯಾಸಯುತವಾದದ್ದಾದರೂ,
ಹಗಲು ಮುಸುಕಿನಿಂದ ಮಬ್ಬಾದದ್ದಾದರೂ,
ನನ್ನ ರಕ್ಷಕನು ಚಿಂತಿಸುತ್ತಾನೆ ಎಂದು ನಾನು ಬಲ್ಲೆನು.

## ಪಾಪವು ನಮ್ಮ ಜೀವಿತಗಳಲ್ಲಿ ಮಿತಿಮೀರಿದಾಗಲೂ ಆತನು ಚಿಂತಿಸುವನು (ಲೂಕ 7:36-50)

ಲೂಕ 7:36 ಹೆಚ್ಚಿನ ಮಟ್ಟಿಗೆ ಆಶ್ಚರ್ಯಚಕಿತವಾದಂತೆ ಬಂದಿದೆ. ಫರಿಸಾಯರಿಗೆ ಯೇಸುವಿನ ದಂಡನೆಯ ನಂತರ "ತಕ್ಷಣವೇ ಇದು ಬಂದಿರುವುದಾಗಿದೆ" (7:30-35). ನಾವು ಓದುವಂತೆ "ಫರಿಸಾಯರಲ್ಲಿ ಒಬ್ಬನು ಆತನನ್ನು ತನ್ನ ಜೊತೆಯಲ್ಲಿ ಊಟಮಾಡ ಬೇಕೆಂದು ಬೇಡಿಕೊಂಡಾಗ ..." (ವಚನ 36).[28] ಆ ಫರಿಸಾಯನ ಹೆಸರು ಸಿಮೋನನು (ವಚನ 40). ಯೇಸು ಊಟಕ್ಕಾಗಿನ ಆಹ್ವಾನವನ್ನು ಒಪ್ಪಿಕೊಂಡಮೇಲೆ ಸಂಭವಿಸಿದ ಸಂಗತಿಯು "ಯೇಸುವಿನ ಸಂಪೂರ್ಣ ಸೇವೆ ಯಲ್ಲಿಯೇ ಹೃದಯಸ್ಪರ್ಷಿಯಾದದ್ದು ಆಗಿದೆ."[29]

ಆ ವಿವರಣೆಯತ್ತ ನಾವು ವಿವರವಾಗಿ ನೋಡುವ ಮುನ್ನ,[30] ಇದು ಕ್ರಿಸ್ತನ ಜೀವಿತದ ಅಂತ್ಯವು ಹತ್ತಿರಕ್ಕೆ ಬಂದಿರುವುದಕ್ಕಾಗಿರುವ ಅಭಿಷೇಕದ ಘಟನೆಯು ಅಲ್ಲ ಎಂದು ನಾನು ಒತ್ತಿ ಹೇಳುವವನಾಗಿದ್ದೇನೆ (ಮತ್ತಾಯ 26:6-13; ಮಾರ್ಕ 14:3-9; ಯೋಹಾನ 12:3-8). ಕೆಲ ವಿವರಣೆಗಳು ಸಮಾನವಾಗಿವೆ.[31] ಆದರೆ ಸ್ಥಳ, ಸಮಯ, ಸಂದರ್ಭ ಪಾಲ್ಗೊಂಡವರು ಮತ್ತು ಪರಿಣಾಮಗಳು ಭಿನ್ನವಾಗಿದೆ. (ಲೂಕ ಸುವಾರ್ತೆ 7ರಲ್ಲಿ ಬರುವ ಪಾಪಿಯಾದ ಸ್ತ್ರೀಯು ಮಗ್ದಲದ ಮರಿಯಳು ಎಂಬ ಜನಪ್ರಿಯವಾದ ವಿಚಾರಕ್ಕೆ ಯಾವುದೇ ವಾಕ್ಯದ ಆಧಾರವಿಲ್ಲ ಎಂಬುದನ್ನು ನಾನೂ ಕೂಡಾ ಬೆಂಬಲಿಸುವವನಾಗಿದ್ದೇನೆ.)[32]

ಹಾಗಾದರೆ ಕಥೆಯತ್ತ ಸಾಗೋಣ. ತನ್ನ ಮನೆಗೆ ಯೇಸು ಬರಬೇಕೆಂದು ಸಿಮೋನನು ಯಾಕೆ ಬಯಸಿದ್ದನೋ ನಮಗೆ ತಿಳಿಯದು.[33] ಆತನ ಕಾರಣವು ಏನೇ ಇರಲಿ, ಆತನು ಆದರಣೆಯಿಲ್ಲದವನೂ ಸತ್ಕಾರಮಾಡದವನು ಆಗಿದ್ದನು (ಲೂಕ 7:44-46). ಆ ತಿಥೇಯನ ಅವಮಾರ್ಯದೆಗೆ ಪ್ರತಿಯಾಗಿ ಆ ಊಟದ ಕೋಣೆಯೊಳಕ್ಕೆ ಧಾವಿಸಿದ ಆಮಂತ್ರಣವಿಲ್ಲದ ಆ ಪಾಪಮಯವಾದ ಆಸ್ತ್ರೀಯ ಪ್ರೀತಿಯನ್ನು ಕುರಿತು ಯೇಸು ಒಂದು ಕಥೆಯನ್ನು ಹೇಳಿದನು. ಆತನ ಹಿಂದೆ ನಿಂತುಕೊಂಡು "ಅಳುತ್ತಾ ತನ್ನ ಕಣ್ಣೀರಿನಿಂದ ಆತನ ಪಾದಗಳನ್ನು ತ್ಯಾಗಮಾಡಿ ತನ್ನ ತಲೆಕೂದಲಿನಿಂದ ವರೆಸಿ ಅವುಗಳಿಗೆ ಮುದ್ದಿಟ್ಟು ಆ ತೈಲವನ್ನು ಹಚ್ಚಿದಳು" (ವಚನ 38).

"ಇವಳು ದುರಾಚಾರಿ; ಇವನು ಪ್ರವಾದಿಯಾಗಿದ್ದರೆ[34] ತನ್ನನ್ನು ಮುಟ್ಟಿದ ಹೆಂಗಸು ಇಂಥವಳೆಂದು ತಿಳಿದುಕೊಳ್ಳುತ್ತಿದ್ದನು" (ವಚನ 39) ಎಂದು ಮನದಲ್ಲಿ ಅಂದುಕೊಂಡ ಸಿಮೋನನು ಆಶ್ಚರ್ಯಚಕಿತನಾದನು. ಯೇಸು ಯಾರು ಎಂದು ತಾನು ತೀರ್ಮಾನಮಾಡುತ್ತಿರುವುದಾಗಿ ಈ ಫರಿಸಾಯನು ಅಂದುಕೊಂಡನು; ಆದರೆ ಆತನು ನಿಜವಾಗಿ ತನ್ನ ಸ್ವಂತ ಆತ್ಮೀಕ ಮನಸ್ಥಿತಿಯ ಮೇಲೆ ತೀರ್ಪು ಮಾಡುವವನಾಗಿದ್ದನು.

ಸಿಮೋನನ ವಿಚಾರವನ್ನು ತಿಳಿದಂಥ ಯೇಸು ಚಿಕ್ಕದಾಗಿ ಆದರೆ ಸುಂದರವಾದ ಇಬ್ಬರು ಸಾಲಗಾರರ ಸಾಮ್ಯವನ್ನು ಹೇಳಿದನು.[35] ನಾವು ಈ ಪ್ರಸಂಗದಲ್ಲಿ, "ಪ್ರೀತಿ, ಕಣ್ಣೀರು, ಮತ್ತು ಕ್ಷಮಾಪಣೆ" ಬಗೆಗಿನ ಆ ಸಾಮ್ಯವನ್ನು ವಿವರವಾಗಿ ಅಭ್ಯಾಸಿಸುವಾ. ಒಬ್ಬನು ತನ್ನ ಆತ್ಮೀಕ ಅವಶ್ಯಕತೆಗಳ ಬಗೆಗೆ ಅರಿವಿಲ್ಲದವನಾಗಿರುತ್ತಾನೆಯೋ, ಆತನು ಫರಿಸಾಯನಂತೆ "ಅಲ್ಪವಾದ ಪ್ರೀತಿಯುಳ್ಳವನಾಗಿರುತ್ತಾನೆ." ಇದಕ್ಕೆ ವ್ಯತಿರಿಕ್ತವಾಗಿ ಆ ಪಾಪಿಯಾದ ಸ್ತ್ರೀಯು ತನ್ನ ಪಾಪದ ಸಾಲವನ್ನು ಕೊಡಲು ತಾನು ಅಸಮರ್ಥಳು ಎಂದು ಹೆಚ್ಚಾಗಿ ಅರಿತುಕೊಂಡಳು. ಹೀಗೆ ಅವಳು ಕ್ಷಮಿಸಲ್ಪಟ್ಟಳು ಮತ್ತು "ಹೆಚ್ಚಾಗಿ ಪ್ರೀತಿಸಲ್ಪಟ್ಟಳು" (ವಚನ 47).

ಪಾಪವೆಂದಾದರೂ ನಿನ್ನನ್ನು ವಶಪಡಿಸಿಕೊಳ್ಳಲು ಹೆದರಿಸಿದ್ದಿದೆಯಾ? ನೀನು ಮಾತನಾಡಿದ ಅಥವಾ ನೀನು ಮಾಡಿದ ಒಂದರ ಮೇಲೆ ಯಾತನೆಪಡುತ್ತಾ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದಿದ್ದಿಯಾ? ಆರೋಪಿಯ ಪ್ರಜ್ಞೆಯ ನೋವು ನಿನಗೆ ಎಂದಾದರೂ ತಿಳಿದಿದ್ದಿದೆಯಾ? ಖಚಿತವಾಗಿ ನಿನಗಾಗಿದೆ. ನಾವೆಲ್ಲರೂ ಪಾಪಿಗಳು (ರೋಮಾಪುರ 3:23), ನಮ್ಮ ಪಾಪದ ಸಾಲವನ್ನು ಮರಳಿಸಲು ಅಸಮರ್ಥರಾದವರೂ ಆಗಿದ್ದೇವೆ (ರೋಮಾಪುರ 6:23). ನಮ್ಮ ಜೀವಿತದಲ್ಲಿ ಪಾಪವು ಮಿತಿಮೀರಿದಾಗಲೂ ಕೂಡಾ ಯೇಸು ಚಿಂತಿಸುವವನಾಗಿದ್ದಾನೆ ಎಂಬುದು ಎಂಥ ಅದ್ಭುತವಲ್ಲವೇ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಆತನೆಡೆಗೆ ತಿರುಗಿಕೊಂಡರೆ ಆತನು ನಮ್ಮನ್ನು ಕ್ಷಮಿಸುವನು ಮತ್ತು ನಮ್ಮನ್ನು ಬಿಡುಗಡೆಮಾಡುವನು ಎಂದು ಅರಿತುಕೊಳ್ಳುವದು ಎಂಥಾ ಅಚ್ಚರಿಯ ಸಂಗತಿಯಲ್ಲವೇ (ಗಲಾತ್ಯ 5:1)![36]

ನಾನು ಪ್ರಯತ್ನಿಸಿ ಸೋತಾಗ ಯೇಸು ನನಗಾಗಿ ಚಿಂತಿಸುವನೇ?
ಕೆಲಬಲವಾದ ಶೋಧನೆಗಳಿಗೆ ಬಲಿಯಾಗದಂತೆ,
ನನ್ನ ಆಳವಾದ ನೋವುಗಳಿಗೋಸ್ಕರ ನಾನು ಯಾವುದೇ ಶಮನವನ್ನು ಕಾಣದಿದ್ದಾಗ
ನನ್ನ ಕಣ್ಣೀರು ರಾತ್ರಿಯೆಲ್ಲಾ ಹರಿದಾಗ.

ಓಹ್ ಹೌದು, ಆತನು ಚಿಂತಿಸುತ್ತಾನೆ; ನಾನು ಬಲ್ಲೆನು ಆತನು ಚಿಂತಿಸುತ್ತಾನೆ
ಆತನ ಹೃದಯವು ನನ್ನ ದುಃಖದಿಂದ ತಟ್ಟಲ್ಪಟ್ಟಿತು
ದಿನಗಳು ಆಳವಾದ ಆಯಾಸ ಯುತವಾದದ್ದಾದರೂ, ಹಗಲು ಮುಸುಕಿನಿಂದ
ಮಬ್ಬಾದದ್ದಾದರೂ
ನನ್ನ ರಕ್ಷಕನು ಚಿಂತಿಸುತ್ತಾನೆ ಎಂದು ನಾನು ಬಲ್ಲೆನು.

# ಮುಕ್ತಾಯ

ನಮ್ಮ ಪಾಠದಲ್ಲಿ ಯೇಸು ಚಿಂತಿಸುತ್ತಾನೆ ಎಂಬುದಕ್ಕೆ ನಾಲ್ಕು ಉದಾಹರಣೆಗಳನ್ನು ನೋಡಿದೆವು: ರೋಮವು ನಮ್ಮ ಮನೆಗೆ ಮುತ್ತಿಗೆ ಹಾಕಿದಾಗ ಯೇಸು ಚಿಂತಿಸುತ್ತಾನೆ; ಮರಣವು ನಮ್ಮ ಹೃದಯವನ್ನು ಒಡೆದಾಗ ಯೇಸು ಚಿಂತಿಸುತ್ತಾನೆ; ಚಿಂತೆ ನಮ್ಮ ಮನವನ್ನು ಮುತ್ತಿದಾಗ ಯೇಸು ಚಿಂತಿಸುತ್ತಾನೆ; ಪಾಪವು ನಮ್ಮ ಜೀವಿತದಲ್ಲಿ ತುಂಬಿಕೊಂಡರೂ ಯೇಸು ಚಿಂತಿಸುತ್ತಾನೆ. ಅಂತೆಯೇ ಪೇತ್ರನು "ಹೀಗಿರುವುದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು. ನಿಮ್ಮ ಚಿಂತೆಯನೆಲ್ಲಾ ಆತನ ಮೇಲೆ ಹಾಕಿರಿ, *ಆತನು ನಿಮಗೋಸ್ಕರ ಚಿಂತಿಸುತ್ತಾನೆ*" (1 ಪೇತ್ರ 5:6, 7; ಒತ್ತಿ ಹೇಳಿದ್ದು ನನ್ನದು).

ಈ ಪಾಠದಲ್ಲಿನ ಅಂತಿಮ ಸಾಮ್ಯದ ಸಾಮಾನ್ಯ ಅನ್ವಯವನ್ನು ನಾವು ಮಾಡೋಣ: ಯೇಸು ಎಷ್ಟು ಚಿಂತಿಸುತ್ತಾನೆ ಮತ್ತು ಎಷ್ಟರಮಟ್ಟಿಗೆ ಅವರಿಗೆ ಚಿಂತೆ ಮಾಡಿದ್ದಾನೆ ಎಂದು ಅರಿತಿರುವವರು, ಆತನನ್ನು ಹೆಚ್ಚಾಗಿ ಪ್ರೀತಿಸುತ್ತಾರೆ ಮತ್ತು ತಮ್ಮ ಆ ಮೆಚ್ಚುಗೆಯನ್ನು ತೋರಿಸುವವರಾಗಿರುತ್ತಾರೆ. ಕರ್ತನು ತನ್ನ ಆಶೀರ್ವಾದಗಳನ್ನು ನಮ್ಮ ಮೇಲೆ ಸುರಿಸುತ್ತಾನೆ. ನಾವು ಆತನನ್ನು ಪ್ರೀತಿಸುತ್ತೇವೆಯೇ? ಆ ಪ್ರೀತಿಯನ್ನು ನಾವು ವ್ಯಕ್ತಪಡಿಸುತ್ತಿದ್ದೇವೆಯೇ?

---

ಟಿಪ್ಪಣಿಗಳು

[1]"ಜಾತ್ರೆಯು ಜನರ ಪಟ್ಟಣಕ್ಕೆ ಬರುತ್ತದೆ" ಎಂದು ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಹೇಳಿದನು, ಆಗ ಇನ್ನೊಬ್ಬ ಮನುಷ್ಯನು "ಇಲ್ಲ ಯೇಸು ಇನ್ನೊಂದು ಭೇಟಿಯನ್ನು ಇಡುತ್ತಿದ್ದಾನೆ" ಎಂದು ಉತ್ತರಿಸಿದ ಆ ಸನ್ನಿವೇಶವನ್ನು ನಾನು ಊಹಿಸಿಕೊಳ್ಳಬಲ್ಲೆ. [2]ಯೇಸುವಿನ ಜೀವಿತದ ಈ ವೃತ್ತಭಾಗವು ಅನೇಕ ಮೂಲಗಳಲ್ಲಿ ಸಿಕ್ಕುವುದಾಗಿದ್ದು Richard Rogersರ ಮತ್ತಿತರರ ಬರಹವನ್ನು ಒಳಗೊಂಡಿರುವುದಕ್ಕೆ ಇದು ಮಾರ್ಗವಾಗಿದೆ. ಇದನ್ನು ಯಾರು ಹುಟ್ಟುಹಾಕಿದರೆಂದು ನನಗೆ ತಿಳಿದಿಲ್ಲ. [3]ಮತ್ತಾಯನ ವಿವರಣೆಯ ಪ್ರಕಾರ ಶತಾಧಿಪತಿಯು ನೇರವಾಗಿ ಯೇಸುವಿನೊಡನೆ ಮಾತನಾಡುವುದನ್ನು ಸೂಚಿಸುವುದಾಗಿದ್ದರೆ ಲೂಕನ ವಿವರಣೆಯು ಆ ಅಧಿಪತಿಯು ಯೇಸುವಿನ ಬಳಿಗೆ ಮಾತನಾಡಲಿಕ್ಕೆ ಜನರನ್ನು ಕಳುಹಿಸಿದನ್ನು ಎಂದಿದೆ. ಬಹುಶಃ ಇಬ್ಬರೂ ಸರಿಯಾಗಿದ್ದರೆ ಅಥವಾ ಅಯೋಗ್ಯನೆಂಬ ಭಾವನೆಯನ್ನು ಹೊಂದಿದ ಶತಾಧಿಪತಿಯು ಆತನು ಕಳಿಸಿದವರ ಮೂಲಕವೇ ಯೇಸುವಿನೊಡನೆ ಮಾತನಾಡಿದನು. [4]ವಿಶೇಶವಾಗಿ ದೂರದಿಂದಲೆ ಸ್ವಸ್ಥಮಾಡುವಿಕೆಯಲ್ಲಿಯೇ ಆ ಎರಡೂ ಘಟನೆಗಳು ಕೆಲ ಸಾಮ್ಯಗಳನ್ನು ಹೊಂದಿವೆ. [5]"ಶತಾಧಿಪತಿಯು" ಆದಂತ ಆತನು ನೂರುಜನ ಸೈನಿಕರ ಜವಾಬ್ದಾರಿಯುಳ್ಳ ಅಧಿಕಾರಿಯು ಆಗಿದ್ದನು. [6]ಮೊದಲ ಶತಮಾನದ ಕೆಲ ಅವಶೇಶಗಳಲ್ಲಿ ಕಪೆರ್ನೌಮಿನ ಸಭಾಮಂದಿರವು ಇನ್ನೂ ಕಂಡುಬರುವುದಾಗಿದೆ. [7]ದೇವರಲ್ಲಿ ಭಯವುಳ್ಳ ಅವನು ದೇವರಲ್ಲಿ ನಂಬಿಕೆಯಿಟ್ಟವನಾಗಿದ್ದನು, ಆದರೆ ಸುನ್ನತಿಯನ್ನು ಹೊಂದಿರಲಿಲ್ಲ. ಹೀಗಾಗಿ ಆತನು ಮತಾಂತರವಾದ ಯೆಹೂದಿಯಾದನು. [8]ಶತಾಧಿಪತಿ ನಂಬಿಕೆಯು ಅನೇಕ ಅನ್ಯಜನರಿಗೆ (ಪೂರ್ವದಲ್ಲಿ ಹಾಗೂ ಪಶ್ಚಿಮದಲ್ಲಿ "ರುವವವರಿಗೆ") ಪ್ರೇರಣೆಯಾದ ಒಲವು ಆಗಿದ್ದು ಅನೇಕ ಯೆಹೂದಿಗಳು ("ದೇವರ ರಾಜ್ಯದ ಮಕ್ಕಳೂ") ಆಗದೇ ಇರುವಲ್ಲಿ ಇವರು ಕ್ರಿಸ್ತನ ರಾಜ್ಯದ ಭಾಗಗಳಾದರು (ಮತ್ತಾಯ 8:11, 12). [9]Frank E. Graeff, "Does Jeuse Care?" *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994). [10]ಕೆಲ ಹಸ್ತಪ್ರತಿಗಳಲ್ಲಿ "ಮರುದಿನ" ಎಂದಿದೆ. KJVಯಲ್ಲಿ "ಒಂದು ದಿನದ ನಂತರ" ಎಂದಿದೆ.

[11]"ಯೇಸುವಿನ ಸೇವೆಯ ಅವಧಿಯಲಿನ ಪ್ಯಾಲಿಸ್ಟೈನ್" ಎಂಬ ನಕಾಶೆಯನ್ನು ನೋಡಿರಿ. [12]ಗ್ರೀಕ್ ಪದದ ಭಾಷಾಂತರದ "ಶವಪೆಟ್ಟಿಗೆ"ಯು ದೇಹವನ್ನು ಅದರ ಮೇಲಿಟ್ಟುಕೊಂಡು ಒಯ್ಯುವುದಕ್ಕೆ ಇರುವ ಕಟ್ಟಿಗೆಯ ಸ್ಟ್ರೆಚರ್ ಎಂದೂ ಸೂಚಿಸಬಹುದು (a "bier"; KJV ನೋಡಿರಿ). ಯೆಹೂದಿಗಳು ಶವಪೆಟ್ಟಿಗೆಯನ್ನು ಖಚಿತಿತವಾಗಿ ಬಳಸುತ್ತಿದ್ದರು ಎಂದು ಕೆಲವರು ನಂಬುವವರಾಗಿದ್ದಾರೆ. [13]ಜನಸಮೂಹದ ಮೇಲಾದ ಪ್ರಭಾವವು ಯೇಸು ಒಬ್ಬನನ್ನು ಎಬ್ಬಿಸಿದ ಘಟನೆಯು ಇದು ಮೊದಲಸಾರಿ ಎಂದು ಸೂಚಿಸುವುದಾಗಿದೆ. ಸತ್ತವರು ಎಲಿಯ ಮತ್ತು ಎಲೀಶನ ಸೇವೆಯ ಅವಧಿಯಲ್ಲಿ ಎಬ್ಬಿಸಲ್ಪಟ್ಟಿದ್ದರು (1 ಅರಸು 17:17-24: 2 ಅರಸು 4:32-37), ಆದರೆ ಇದು ಯೇಸುವಿನ

ಸಮಯಕ್ಕಿಂತ ಬಲು ಹಿಂದಿನ ಸಮಯದಲ್ಲಿ ಆದುದಾಗಿದ್ದವು. [14]ಪೇತ್ರನು ರೋಗಿಯನ್ನು ಸ್ವಸ್ಥಮಾಡಿದನು (ಅಪೊಸ್ತಲರ ಕೃತ್ಯಗಳು 9:32-35), ಮರಣದಿಂದ ಕೂಡಾ ಎಬ್ಬಿಸಿದನು (ಅಪೊಸ್ತಲರ ಕೃತ್ಯಗಳು 9:36-42). [15]ಲೂಕ 7:17ರಲ್ಲಿನ "ಯುದಾಯ" ಎಂಬ ಪದವು "ಯೆಹೂದಿಗಳ ಭೂಮಿ" (ಅದು ಪಾಲೀಸ್ತೇನ್) ಅಥವಾ ಈ ಪಾರಿಭಾಷೆಯನ್ನು ಒಳಗೊಂಡ ಯೂದಾಯದ ಪ್ರಾಂತ ಎಂದು ಅರ್ಥವನ್ನು ಕೊಡುತ್ತದೆ. [16]"ಯೇಸುವಿನ ಸೇವೆಯ ಅವಧಿಯಲ್ಲಿನ ಪ್ಯಾಲಿಸ್ಟೈನ್" ಎಂಬ ನಕಾಶೆಯನ್ನು ನೋಡಿರಿ. [17]ತನ್ನ ಶಿಷ್ಯರೊಡನೆ ಯೋಹಾನನು ಸಂಪರ್ಕಿಸಿದಲ್ಲಿ ಆತನು ಹೊಂದಿದ ವಿಶೇಷ ಅಧಿಕಾರದ ಸಂಗತಿಯು ಕೈಸರಯದಲ್ಲಿ ಸೆರೆಯಾಗಿದ್ದ ಪೌಲನಿಗೆ ಸಾಮ್ಯವಾದದ್ದಾಗಿದೆ (ಅಪೊಸ್ತಲರ ಕೃತ್ಯಗಳು 24:23). [18]ಕೊಡಲಿಯಿಂದ ಕತ್ತರಿಸುವ ಮತ್ತು ಕಣದಲ್ಲಿ ಸ್ವಚ್ಛಮಾಡುವ ಯೋಹಾನನ ಪ್ರವಾ ದನೆಯು ಒಂದು ಭಾಗವು ಯೆರೂಸಲೇಮು ನಾಶವಾದಾಗ ಬಹುಶ ಸಂಪೂರ್ಣಗೊಳಿಸಲ್ಪಟ್ಟಿತು. ಅದರ ಅಂತಿಮ ಸಂಪೂರ್ಣಗೊಳ್ಳುವಿಕೆಯು ನ್ಯಾಯತೀರ್ಪಿನ ದಿನದಂದೇ. [19]ಮತ್ತಾಯ 11:12ರಲ್ಲಿನ ಯೇಸುವಿನ ಗೂಡಾರ್ಥವು ಯೋಹಾನನ ಆಶಯವನ್ನು ಮತ್ತು ದೇವರಿಗೆ ಆತನ ಉದ್ದೇಶವನ್ನು ಆತನ ಚಿತ್ತಾನುಸಾರವಾಗಿ ಆತನ ವೇಳಾಪಟ್ಟಿಯಂತೆ ಮಾಡುವ ಬದಲು ದೇವರ ರಾಜ್ಯದೊಳಗೆ ಅಸ್ತಿತ್ವವಿರುವ ಇತರರ ಅವಸರವನ್ನು ಸೂಚಿಸುವುದಾಗಿದೆ. [20]ನನ್ನ ಭಾಗದಲ್ಲಿ "ನಾವು ದೇವರಿಗೆ ದೂರಿಕರಿಸುವುದುಲ್ಲವೂ, ಆತನು ನಮ್ಮನ್ನು ದೂರಿಕರಿಸುವುದಿಲ್ಲ" ಎಂದು ನಾವು ಹೇಳುವವರಾಗಿದ್ದೇವೆ.

[21]ನಾನು ತಿಳಿದಂತೆ, ಇದು ಯೇಸು ಮತ್ತು ಯೋಹಾನರ ಮಧ್ಯದ ಕೊನೆಯ ಸಂಭಾಷಣೆಯು ಆಗಿತ್ತು. ಯೇಸುವಿನ ಸಂದೇಶಕ್ಕೆ ಯೋಹಾನನ ಪ್ರತಿಕ್ರಿಯೆಯು ಏನಾಗಿತ್ತು ಎಂದು ನಮಗೆ ಹೇಳ ಲ್ಪಟ್ಟಿಲ್ಲ, ಆದರೆ ವಾಸ್ತವವೆಂದರೆ ಕೆಲ ವರ್ಷಗಳ ನಂತರ ಮತ್ತಾಯ ಮತ್ತು ಲೂಕರ, ಕ್ರಿಸ್ತನ ಹೊಳೆಯುವ ವರ್ಣನೆಯ ವಿವರವು ಕರ್ತನ ಸಹಾಯದಿಂದ ಯೋಹಾನನು ತನ್ನ ಸಂಶಯವನ್ನು ಹಿಂದಕ್ಕೆ ಬಿಟ್ಟನು ಎಂದು ನನಗೆ ಸಮಜಾಯಿತು. [22]Quoted from *The Living Gospels* (Wheaton, Ill.: Tyndale House, 1966) in *The Man Jesus* (Glendale, Calif.: Regal Books, G/L Publications, 1967), 68. [23]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 282. [24]ಇದು "ಕೈಯಲ್ಲಿ" ಎಂಬ ಪಾಠದಲ್ಲಿ ಚರ್ಚಿತವಾದದ್ದಾಗಿದ್ದು ಇದು *ಕ್ರಿಸ್ತನ ಜೀವನ ಚರಿತ್ರೆ, 1* ಸಿಕ್ಕುವುದಾಗಿದೆ. [25]McGarvey and Pendleton, 283. [26]ಪಟ್ಟಿಯಾದ ಪ್ರತಿಯೊಂದೂ ಪಟ್ಟಣಗಳು ಕಪೆರ್ನೌಮಿನಿಂದ ಸ್ವಲ್ಪದೂರದಲ್ಲಿವೆ. ಯೇಸುವಿನ ಸೇವೆಯ ಅವಧಿಯಲ್ಲಿನ ಪ್ಯಾಲಿಸ್ಟೈನ್" ಎಂಬ ನಕಾಶೆಯನ್ನು ನೋಡಿರಿ. [27]ನೊಗವು ಎರಡು ಕಟ್ಟಿಗೆಯನ್ನು ಅಡ್ಡವಾಗಿ ಹೊಂದಿದ್ದು ಆಕಾರದಲ್ಲಿ ಇರುವ ಕಟ್ಟಿಗೆಯ ತುಂಡುಗಳು ಪ್ರಾಣಿಗಳು ಜೊತೆಯಾಗಿ ಕೆಲಸಮಾಡಲು ಸಹಾಯಿಸುವವುಗಳಾಗಿವೆ. ಜಗತ್ತಿನ ಕೆಲವಡೆ ಇನ್ನೂ ನೊಗಗಳನ್ನು ಬಳಸುತ್ತಾರೆ; ಇನ್ನೂ ಕೆಲವರು ಹಿಂದಿನ ಕೆಲಪದ್ಧತಿಗಳನ್ನು ಬಳಸುತ್ತಾರೆ. "ನೋಗ" ಎಂಬ ಪದವು ಸಾಮಾನ್ಯವಾಗಿ ಹೊರೆಯನ್ನು ಅರ್ಥೈಸಿಕೊಳ್ಳಲು ಬಳಸಲ್ಪಡುವುದಾಗಿದೆ (ಯೆಶಾಯ 9:4; ಯೆರಮೀಯ 27:12; ಅಪೊಸ್ತಲರ ಕೃತ್ಯಗಳು 15:10; ಆದಿಕಾಂಡ 5:1; 1 ತಿಮೊಥ 6:1). ಯೇಸುವಿನ ದೃಷ್ಟಾಂತದಲ್ಲಿ, ವಿಶ್ವಾಸಿಯು ಕ್ರಿಸ್ತನೊಡನೆ "ನೊಗವಾಗಿದ್ದಾನೆ" ಮತ್ತು ಕ್ರಿಸ್ತನು ಆ ನೊಗದ ಭಾರದ ಹೆಚ್ಚಿನ ಭಾಗವನ್ನು ಹೊತ್ತಿದ್ದಾನೆ. ನಾವು ಆತನಿಗೆ ಕೊಟ್ಟಿದಾದ್ದರೆ ಆತನು ಮಾಡುತ್ತಾನೆ, ಅಂತೆಯೇ "ಆ ನೊಗವು ಮೃದುವಾದದ್ದು" ಮತ್ತು ಹೊರೆಯು ಹೌರವಾದದ್ದು ಎಂದು ಹೇಳುತ್ತಾನೆ. [28]ಈ ಘಟನೆಯು ಎಲ್ಲಿ ಸಂಭವಿಸಿತೆಂದು ನಮಗೆ ತಿಳಿಯದು. ಲೂಕ 7:37 ಸೂಚಿಸುವಂತೆ "ಪಟ್ಟಣದಲ್ಲಿ" ಎಂದಿದೆ. ಆದರೆ ಈ ಪಟ್ಟಣವು ಯಾವುದೆಂದು ನಮಗೆ ತಿಳಿಯದು. [29]B. S. Dean, "An Outline of New Testament History," *Truth for Today* (March 1992): 18. [30]ಏನು ಸಂಭವಿತೆಂಬುದರ ವಿವರಣೆಗಾಗಿ ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ "ಪ್ರೀತಿ, ಕಣ್ಣೀರು ಮತ್ತು ಕ್ಷಮಾಪಣೆ" ಎಂಬ ವಿವರವಾದ ವಿವರಣೆಯನ್ನು ನೋಡಿರಿ.

[31]ಎರಡೂ ಹಬ್ಬಗಳು ಸಿಮೋನ ಎಂಬ ಹೆಸರಿನ ಮನುಷ್ಯನ ಮನೆಯಲ್ಲಿಯೇ ಆದವು, ಒಬ್ಬನು ಫರಿಸಾಯನು, ಇನ್ನೊಬ್ಬನು (ಶುದ್ಧವಾದ) ಕುಷ್ಟರೋಗಿ. ಸಿಮೋನ ಎಂಬುದು ಸಾಮಾನ್ಯವಾದ ಹೆಸರಾಗಿದೆ. ಹೊಸ ಒಡಂಬಡಿಕೆಯಲ್ಲಿ ಒಂಬತ್ತು ಜನ ಸಿಮೋನರು ಸೂಚಿಸಲ್ಪದ್ದಾರೆ; ಪ್ಯಾಲಿಸ್ತೇನ ನಲ್ಲಿ ಬಹುಶಃ ಸಾವಿರ ಇರಬಹುದು. ತಿರುಗಿ, ಎರಡೂ ಪ್ರಕರಣದಲ್ಲಿ, ಯೇಸು ಸುಗಂಧ ತೈಲದಿಂದ ಅಭಿಷೇಕಿಸಲ್ಪಟ್ಟನು, ಆದರೆ ವಿಭಿನ್ನ ಸ್ತ್ರೀಯರಿಂದ ವಿಭಿನ್ನ ಫಲಗಳಿಂದ. [32]ಮಗ್ದಲದ ಮರಿಯಳು ಈ ಘಟನೆಯ ನಂತರ ಸೂಚಿತವಾಗಿದ್ದು ನಿಜ (ಲೂಕ 8:2), ಆದರೆ ಪಾಪ ಮತ್ತು ದೆವ್ವ ಹಿಡಿದವರ ಮಧ್ಯ ಯಾವ ಸಂಬಂಧವು ಇಲ್ಲ ಎಂದು McGarvey ಗಮನಿಸಿದ್ದಾರೆ. ಧಾರ್ಮಿಕವಾಗಿ ನಿರ್ಮಿಸಲ್ಪಟ್ಟ

ಒಪ್ಪಿಕೊಳ್ಳಲ್ಪಟ್ಟ ನಂತರದ ನಿಯಮಗಳು ಪಾಪವಿಲ್ಲದವು ಎಂದು ಸೂಚಿತವಾಗುವಾಗ ಹಿಂದಿನ ನಿಯಮಗಳು ಉಪೇಕ್ಷಿತವಾದವು ಎಂದು ಸೂಚಿಸುವವುಗಳು ಆಗಿವೆ. ಆ ಕ್ಲೇಷವು ಪಶ್ಚಾತ್ತಾಪ ಎಂದು ಎಲ್ಲಿಯೂ ಮಾತನಾಡುವುದಿಲ್ಲ ಆದರೆ ಕೇವಲ ದುರ್ದೈವ ಆಗಿದೆ. (McGarvey and Pendleton, 291.) [33]ಸಾಧ್ಯತೆಯಿರುವ ಚರ್ಚೆಗಾಗಿನ ಕಾರಣಗಳನ್ನು ಈ ಪಾಠದಲ್ಲಿ ಮುಂದೆ ಬರುವ ಪ್ರಸಂಗದಲ್ಲಿ ನೋಡಿರಿ. [34]ಕೆಲ ಹಸ್ತಪ್ರತಿಗಳಲ್ಲಿ "ಪ್ರವಾದಿ" ಎಂಬ ಪರಿಚ್ಛೇದವು ಇದೆ. "ಪ್ರವಾದಿ" ಎಂಬ ಪರಿಚ್ಛೇದವು ಮೆಸ್ಸೀಯನನ್ನು ಸೂಚಿಸುವುದಾಗಿದೆ (ಧರ್ಮೋಪದೇಶಕಂಡ 18:15). [35]ಚಿಕ್ಕ ಕಥೆಯು ಸಾಮ್ಯ ಎಂದು ವೇದಭಾಗದಲ್ಲಿ ಕರೆಯಲ್ಪಡುವುದಿಲ್ಲ, ಆದರೆ ಅದು ಸಾಮಾನ್ಯ ವಾಗಿ ಆ ಪ್ರಕಾರದಲ್ಲಿ ಒಂದು ಎಂದು ಪರಿಗಣಿಸಲ್ಪಡುವದಾಗಿದೆ. [36]ನಿಮ್ಮ ವಿದ್ಯಾರ್ಥಿ ಯಾರಾಗಿದ್ದಾರೆ ಎಂಬುದರ ಮೇಲೆ ಅವಲಂಭಿಸಿದ್ದು ಅವರು ಕರ್ತನೆಡೆಗೆ ಹೇಗೆ ತಿರುಗಿಕೊಳ್ಳಬೇಕೆಂಬುದರ ಮೇಲೆ ಒಂದು ರೂಪರೇಶೆಯನ್ನು ನೀವು ತಯಾರಿಸಬಹುದು. ಅವರು ಇನ್ನೂ ಕ್ರೈಸ್ತರಾಗಿಲ್ಲದಿದ್ದರೆ, ಅವರಿಗೆ ಅಪೊಸ್ತಲರ ಕೃತ್ಯಗಳು 2:36-38ರ ಬಗೆಗೆ ಹೇಳಿರಿ. ಅವರು ಕ್ರೈಸ್ತರಾಗಿದಿದ್ದರೆ ಪಶ್ಚಾತ್ತಾಪಪಡಲು ಮತ್ತು ತಮ್ಮ ಪಾಪವನ್ನು ಒಪ್ಪಿಕೊಳ್ಳಲು ಅವರನ್ನು ಪ್ರೋತ್ಸಾಹಿಸಿರಿ (1 ಯೋಹಾನ 1:9; ಯಾಕೋಬ 5:16; ಅಪೊಸ್ತಲರ ಕೃತ್ಯಗಳು 8:22).